<u>ಸಾಕ್ಷಿಯನ್ನು ದಿಃ **04.08.2022** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ವಾದಿಗಳ ಪರ ಶ್ರೀ ಮತಿ ಎಂ ಎಂ ವಕೀಲರಿಂದಃ</u>**

ನಿಡಿ-22 ರಲ್ಲಿರುವ ಕರಿಯಪ್ಪ ಎಂದರೆ ನನ್ನ ತಂದೆ . ಈಗ ನನಗೆ ತೋರಿಸುತ್ತಿರುವ ನಿಡಿ-24 ರಲ್ಲಿರುವ ವೈ ಕೆ ಕುಮಾರ ಸ್ವಾಮಿ ಬಿನ್ ಲೇ, ಕೆ. ವೀರಪ್ಪ ಇರುವುದು ನಿಜ. ಆದರೆ ಆದರೆ ನನ್ನ ತಂದೆ ಹೆಸರು ಕರಿಯಪ್ಪ ಬದಲಾಗಿ ನನ್ನ ದೊಡ್ಡಪ್ಪ ಕೆ. ವೀರಪ್ಪನ ಹೆಸರು ತಪ್ಪಾಗಿ ನಮೂದಾಗಿರುವುದು ಸರಿ. ನಿಡಿ-24 ರಲ್ಲಿರುವ ಜಮೀನು ಈ ದಾವೆಯ 1 ನೇ ಐಟಂ ಆಸ್ತಿ ಅನ್ನುವುದು ನಿಜ. ಆದರೆ ಪಲ್ಲೆಕಪ್ಪನಿಗೆ ಮರಣ ಶಾಸನ ಮೂಲಕ ಸದರಿ ಆಸ್ತಿ ಬಂದಿದ್ದು ಅದನ್ನು ಲಪಟಾಯಿಸಲು ನಿಡಿ-24 ನ್ನು ಸೃಷ್ಟಿಸಿದ್ದೇವೆ ಎಂದರೆ ಸುಳ್ಳು. ನಿಡಿ 25 ಮತ್ತು 26 ರಲ್ಲಿರುವ ಆಸ್ತಿಗಳು ಈ ದಾವೆಯ 1 ನೇ ಐಟಂ ನ ಭಾಗ ಅನ್ನುವುದು ಸುಳ್ಳು. ನಿಡಿ-27 ಮತ್ತು 28 ರಲ್ಲಿರುವ ಜಮೀನುಗನಳ್ಳು ಕರಿಯಮ್ಮ ಕೋಂ ಕೊರಮಪ್ಪ ನ ಪರವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಅನ್ನುವುದು ಸರಿಯಲ್ಲ. 1986-87 ರಲ್ಲಿ ಕರಿಯಮ್ಮ ಕೋಂ ಕೊರಮಪ್ಪನವರಿಗೆ ವಯಸ್ಸಾಗಿದ್ದರಿಂದ ಬುದ್ದಿ ಬ್ರಮಣೆಯಾಗಿತ್ತು ಅಲ್ಲದೆ ಕಣ್ಣು ಸಹ ಕಾಣುತ್ತಿರಲಿಲ್ಲ ಅದರ ದುರ್ಲಾಭ ಪಡೆದು ಖಾತೆ ಪಹಣಿ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯ ಕರಿಯಮ್ಮನ ಆರೋಗ್ಯ ಸ್ಥಿತಿ ಸರಿಯಾಗಿತ್ತು ಎಂದು ಹೇಳುತ್ತಾರೆ. ನಿಡಿ-30 ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ನಿಡಿ-31 ರಸೀದಿ ಪಟ್ಟ ತಯಾರಿಸುವ ಸಾಯಕ್ಕೆ ಕೊರಮಪ್ಪ ಇನ್ನೂ ಜೀವಂತ ಇದ್ದರು ಅನ್ನುವುದು ನನಗೆ ಗೊತ್ತಿಲ್ಲ. ಕೊರಮಪ್ಪ ಜೀವಂತ ಇರುವಾಗ ಅವರ ಹೆಂಡತಿ ಕರಿಯಮ್ಮನ ಹೆಸರು ನಿಡಿ-31 ರಲ್ಲಿ ಬರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಿಡಿ-31 ರ 2 ನೇ ಪುಟದಲ್ಲಿ ಗೊರ್ಲಹಳ್ಳಿ ಈರಪ್ಪನ ಮಗ ಕೊರಮಪ್ಪ ಎಂದು

ನಮೂದಾಗಿರುವುದು ನಿಜ. ಆದರೆ ನಿಡಿ-31 ರ ಮುಖ ಪುಟದಲ್ಲಿ ಕರಿಯಮ್ಮ ಕೋಂ ಕೊರಮಪ್ಪ ಎಂದು ನಾವೇ ಬರೆದು ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-32 ರಿಂದ 37 ರಸೀದಿಗಳು ಕೊರಮಪ್ಪ ಕಂದಾಯ ಪಾವತಿಸಿದ ರಸೀದಿಗಳು ಅನ್ನುವುದು ಸರಿಯಲ್ಲ. ನಿಡಿ-37 ರಲ್ಲಿ 1987-88 ಎಂದು ನಾನೇ ಬರೆದು ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಡಿ-37 ರಲ್ಲಿ ದಿನಾಂಕ ಇಲ್ಲ ಅನ್ನುವುದು ಸರಿಯಲ್ಲ .

ನಿಡಿ-39 ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವೀರಪ್ಪನ ಹೆಸರಿಗೆ ರಸೀದಿ ಪಟ್ಟ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಅನ್ನುವುದು ಸರಿಯಲ್ಲ. ಜಮೀನಿಗೆ ಯಾರು ಬೇಕಾದರು ಕಂದಾಯ ಕಟ್ಟಬಹುದು ಎಂದರೆ ಸರಿಯಲ್ಲ ಆದರೆ ನಿಡಿ-46 ರಿಂದ 49 ರಸೀದಿಗಳು ನಾವು ಕಟ್ಟಿದ್ದ ಕಂದಾಯ ರಸೀದಿಗಳು ಅಲ್ಲ ಅನ್ನುವುದು ಸರಿಯಲ್ಲ.

ಪಲ್ಲೆಕ್ಕಪ್ಪನ ದೊಡ್ಡಪ್ಪನ ಮಗ ವೀರಪ್ಪ ಅನ್ನುವುದು ನಿಜ. ವೀರಪ್ಪ ಹಿರಿಯೂರಿನಲ್ಲಿ ಶಿಕ್ಷಕರಾಗಿದ್ದರು ಅನ್ನುವುದು ನಿಜ. ಪಲ್ಲೆಕಪ್ಪ ಬೆಳಗಾಂ ಮತ್ತು ಬಿಜಾಪುರದಲ್ಲಿ ಸಮಾಜ ಕಲ್ಯಾಣ ಅಧಿಕಾರಿಯಾಗಿ ಕೆಲಸ ಮಾಡಿದ್ದಾರೆ ಅಂದರೆ ನಿಜ. ವಾದಿಗಳ ತಂದೆ ಪಲ್ಲೆಕಪ್ಪ ಬಿಜಾಪುರ್ ಮತ್ತು ಬೆಳಗಾಂ ನಲ್ಲಿದ್ದಾಗ ದಾವಾ ಸ್ವತ್ತಿನ ಕಂದಾಯ ಕಟ್ಟಲು ವೀರಪ್ಪನಿಗೆ ಹಣ ಕಸುಹಿಸುತ್ತಿದ್ದರು ಅದನ್ನೇ ಕಂದಾಯಕಟ್ಟಿದ್ದಾರೆ ಅನ್ನುವುದು ಸುಳ್ಳು. ದಾವಾ ಐಟಂ ನಂ.1 ರ ಆಸ್ತಿ ವಾದಿಯರ ಸಂಪೂರ್ಣ ಮಾಲೀಕತ್ವ ಮತ್ತು ಹಕ್ಕು ಅವರಿಗೆ ಸೇರಬೇಕಾಗಿದೆ ಎಂದರೆ ಸರಿಯಲ್ಲ. ನಿಪಿ-2 ರ ಪ್ರಕಾರ ದಾವಾ ಸ್ವತ್ತಿಗೆ ಮರಣ ಶಾಸನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ 2 ನೇ ಐಟಂ ನಂಬರ್ ಆಸ್ತಿಯಲ್ಲಿ ವಾದಿಗಳಿಗೆ ½ ಪಾಲು ಇದೆ ಅನ್ನುವುದು ಸುಳ್ಳು.

ಪಲ್ಲೆಕಪ್ಪ ಸರ್ಕಾರಿ ಸೇವೆಯಲ್ಲಿದ್ದಾಗ ಬೇರೆ ಬೇರೆ ಊರಿನಲ್ಲಿ ಇರುವಾಗ ಅವರಿಗೆ ಮತ್ತು ಅವರ ಮಕ್ಕಳಿಗೆ ಗೊತ್ತಿರದೇ ಮರಣ ಶಾಸನ ಸೃಷ್ಟಿ ಮಾಡಿ ಕಾನೂನು ಬಾಹಿರವಾಗಿ ವೀರಪ್ಪ ನಂತರ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸುಳ್ಳು.

ದಾವಾ 1 ನೇ ಐಟಂ ನಲ್ಲಿ ವಾದಿಯರಿಗೆ ಗೊತ್ತಿಲ್ಲದೆ ಕಾನೂನು ಬಾಹಿರವಾಗಿ 5 ಎಕರೆ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿಯು ಮೃತ ವೀರಪ್ಪನೇ ಮಾರಾಟ ಮಾಡಿದ್ದಾನೆ ಎಂದು ಹೇಳುತ್ತಾರೆ. ವೀರಪ್ಪನಿಗಾಗಲೀ ಅಥವಾ ನಮಗಾಗಲೀ ದಾವಾ ಸ್ವತ್ತು ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಯರ ಸ್ವಾಧೀನ ಹಕ್ಕೂ ಇದ್ದರೂ ಸಹ ದಾಖಲೆಗಳನ್ನು ಸೃಷ್ಟಿಸಿ ಅವರಿಗೆ ಮೋಸ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.